ಕತ್ತೆ ಬಾಳೆಹಣ್ಣುಗಳಿಗೆ ಹಸಿವು ರಾಜಿಮಾಡಿಕೊಂಡಂತೆ ಕಾಣುತ್ತಿತ್ತು.

***

ಮುಂಗಡದ ಮೇಲಿನ ಬಡ್ಡಿ ಏರುತ್ತ ತಾಯಿ ಸಮ ಮಗಳು ಬೆಳೆದಂತೆ ಬೆಳೆಯುತ್ತಿತ್ತು. ಆಗ ಜನರು ಕಂಡುಕೊಂಡಿದ್ದು, ಪುಣೆಯ ಹಾದಿಯನ್ನು. ಸವಣೂರಿನ ಕೊಯ್ತೆವಾಲೆ ಅವರಿಗೆ ಮುಂಬೈ ಪುಣೆ ನಂಟು. ಕೆಂಪುಮೋದಿನ್ ಅವರನ್ನು ಹಳ್ಳಿಗಳಿಗೆ ಕರೆತಂದ. ಎರಡರಷ್ಟು ಧಾರಣೆಯ ಗ್ಯಾರಂಟಿ ಕೊಟ್ಟ. ಕೊಯ್ತೆವಾಲೆ ದೊಡ್ಡ ವ್ಯಾಪಾರಸ್ಥರು. ಈರುಳ್ಳಿ ಲೋಡುಗಳನ್ನು ಬಾಂಗ್ಲಾದವರೆಗೂ ರಫ್ತು ಮಾಡುವ ಹತ್ತಾರು ಲಾರಿಗಳ ಮಾಲೀಕರು ಎಂದು ತಾರೀಫು ಮಾಡಿದ. ಇದು ಸಹಜವಾಗಿ ರೈತರಿಗೆ ಭರವಸೆ ಕೊಟ್ಟಿತು. ವಖಾರದ ಒಳಸಂಚುಗಳಿಂದ ಬೇಸತ್ತಿದ್ದ ಅವರಿಗೆ ಕೊಯ್ತೆವಾಲೆ ಚಂದ್ರಲೋಕದ ಬೆಳದಿಂಗಳನ್ನು ತಂದು ಸುರಿಯುವ ಚಂದ್ರಾಮನಂತೆ ಕಂಡರು. ಹೊಸ ಹುಕಿಯೊಂದು ಜನರನ್ನು ಹುರಿದುಂಬಿಸಿ, ಲಾರಿ ಹತ್ತಿಸಿತು. ಲಾರಿಗಳ ಮುಂದಾಳತ್ವವನ್ನು ಯಳಂದರಾಯರು ವಹಿಸಿದರು. ರಾಯರ ಅಸಿಸ್ಟೆಂಟ್ ಆಗಿ ಬಕನಿಂಗ ಸೇರಿಕೊಂಡ. ಸುತ್ತ ಊರಿನ ರೈತರ ಕಣಗಳಲ್ಲಿ ಎಷ್ಟೆಷ್ಟು ಮಾಲು ಹದಕ್ಕೆ ಬಂದಿದೆ, ಎಷ್ಟು ಚೀಲಗಳಿವೆ ಎಂಬುದರ ಏಜೆಂಟ್‌ಗಿರಿ ಅವನದ್ದು. ಇನ್ನೂ ಲೋಡಿಂಗ್, ಅನ್‌ಲೋಡಿಂಗ್ ಮತ್ತು ಕೊಯ್ತೆವಾಲೆ ಅವರಿಂದ ಚೀಲಕ್ಕಿಷ್ಟು ಎಂಬಂತೆ ಕಮೀಷನ್ ಕಲೆಕ್ಟ್ ಮಾಡಿ ರಾಯರಿಗೆ ಸಲ್ಲಿಸುವ ಕಾರ್ಯಕ್ಕೆ ಸುಬಾನಿ ಸೇರ್ಪಡೆಯಾದ. ಇಲ್ಲೂ ಒಂದು ಅದೃಶ್ಯ ವಖಾರ ಬಾಯಿತೆರೆದು ಕುಳಿತಿರುವುದು ಜನರ ಗಮನಕ್ಕೆ ಬಾರದೆ ಉಳಿಯಿತು.

ಪುಣೆಗೆ ಹೋಗಿ ಬಂದವರು ಮುಖದಲ್ಲಿ ಹೊಸ ಕಳೆ ಹೊತ್ತು ತಂದಿದ್ದರು. ಕೆಲವರು ವಾರಗಟ್ಟಲೇ ಅಲ್ಲೇ ಉಳಿದು ಬಂದಿದ್ದರು. ಇದಕ್ಕೆ ಬಂಪರ್ ಬೆಲೆ ಸಿಕ್ಕಿರುವುದು ಒಂದು ಕಾರಣವಾದರೆ ಮತ್ತೂ ಒಂದು ಕಾರಣವೆಂದರೆ, ಅದು ತಾರಾಬಾಯಿ ದರ್ಶನ.

ಪುಣೆಗೆ ಮೆಣಸಿನಕಾಯಿ ಮಾರಲು ಹೋದವರು ಬುಧವಾರ ಪೇಟೆಗೆ ಕಾಲಿಟ್ಟು ಬರದಿದ್ದರೆ ಅದ್ಯಾತರ ಜನ್ಮ? ತಾರಾಬಾಯಿ ಪಕ್ಕದ ಅಗಡಿಯ ಹೆಣ್ಣುಮಗಳು. ಅವಳ ಮೂಲ ಹೆಸರು ಪುಟ್ಟವ್ವ. ಅವಳನ್ನು ಅಗಡಿ ಪುಟ್ಟವ್ವ ಎಂತಲೇ ಕರೆಯುವದು. ಹುಟ್ಟಾ ಸುಂದರಿಯಾಗಿದ್ದ ಅವಳು ಜಮೀನ್ದಾರನೊಬ್ಬನ ಕಿರುಕುಳಕ್ಕೆ ತುತ್ತಾದ ದಾರುಣ ಕಥೆಯೊಂದು ಸುತ್ತ ಊರುಗಳಲ್ಲಿ ಅನುಕಂಪದಿಂದ ಕೇಳಿ ಬರುತ್ತದೆ.

ಅಂದು ರಾತ್ರಿ ಗಂಡನ ಸೋತ ರಟ್ಟೆಗಳನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತಿದ್ದಳು. ಈ ಪುರುಷಲೋಕ ಗರತಿಯರನ್ನು ಎಂದಿಗೂ ಸಹಿಸಿಕೊಳ್ಳುವುದಿಲ್ಲ ಎಂದು ರೋದಿಸಿದಳು. ಗಂಡ ರಾತ್ರಿಯಿಡೀ ತಲೆ ನೇವರಿಸುತ್ತ ಸಮಾಧಾನಿಸುತ್ತಲೇ ಇದ್ದ. ಅವನ ದೀನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡಿದ ಪುಟ್ಟವ್ವಳಿಗೆ ಹತಾಶ ಬಡಲೋಕವೊಂದು ತಲೆ ತಗ್ಗಿಸಿಕೊಂಡು ಬಾಳುತ್ತಿರುವುದು ಕಂಡಿತು. ಅವಳ ಅವಮಾನದ ಕುದಿ ತಣ್ಣಗೆ ಆಗುವ ಹಾಗೆ ಕಾಣಲೇ ಇಲ್ಲ. ಹೇಗೆ ತಲೆ ಎತ್ತಿ ಬಾಳುವದು? ಎಂದಿಗೂ ಮುಗಿಯದ ತಿರಸ್ಕಾರದೊಂದಿಗೆ ಪುಟ್ಟವ್ವನ ಬದುಕು ಪುಟ ಬದಲಿಸುವುದರಲ್ಲಿತ್ತು.

ಮರುದಿನ ನಸುಕು. ಶ್ರೀಮಂತರ ಜಮೀನುಗಳಿಗೆ ನಿತ್ಯ ದುಡಿಯುವ ಕೂಲಿಯಾಳುಗಳನ್ನು ಸಜ್ಜು ಮಾಡಿ ಅಟ್ಟಲು ಬರುವ ದುಷ್ಟ ಸೂರ್ಯನನ್ನು ಕಾಣುವ ಮುನ್ನವೇ ಅವಳು ಹೊಸಿಲು ದಾಟಿದಳು. ಮೂಡಲ ದಿಕ್ಕಿಗೆ ಕ್ಯಾಕರಸಿ ಮೂರು ಬಾರಿ ಉಗುಳಿದಳು. ರೈಲು ಹತ್ತಿ ಪುಣೆ ಸೇರಿದಳು. ಅವಳೀಗ ಬುಧವಾರ ಪೇಟೆಯ ತಾರಾಬಾಯಿ. ದೂರದ ಹಳ್ಳಿಗಳಿಂದ ಬಂದಂತಹ ಅನೇಕ ಹತಭಾಗಿನಿಯರ ತಾಯಿ.

